## ಭರತದ ಮಧ್ಯಾಹ್ನ




**ಜೀವನಪ್ರೀತಿ** ಹಾಗೂ ಘನತೆಯ ಮೂಲಕ ಬದುಕಿನ ಸಾರ್ಥಕತೆಯ ಹುಡುಕಾಟ ನಡೆಸುವ ಕಥೆಗಳ ಗುಚ್ಛ ಚಿಂತಾಮಣಿ ಕೊಡ್ಲೆಕೆರೆ ಅವರ ‘ಭರತದ ಮಧ್ಯಾಹ್ನ’. ಈ ಕಥೆಗಳನ್ನು ಕಥೆಗಾರರ ಪ್ರಯೋಗಶೀಲ ಮನೋಭಾವ ಹಾಗೂ ಸಾಹಿತ್ಯದಿಂದ ಅವರು ಬಯಸುವುದು ಏನನ್ನು ಎನ್ನುವುದರ ರೂಪದಲ್ಲೂ ಗಮನಿಸಬಹುದು. ಕಥೆಯನ್ನು ರೋಚಕಗೊಳಿಸುವ ಸಾಧ್ಯತೆಗಳಿಗಿಂತಲೂ ಕಥನ ಕ್ಷಣದಲ್ಲಿನ ಆರ್ದ್ರತೆಯನ್ನು ಹಿಡಿಯುವುದಕ್ಕೆ ಈ ಸಂಕಲನದ ಕಥೆಗಳು ಹಂಬಲಿಸಿರುವಂತಿದೆ.

ಸದ್ಯದ ಸಂದರ್ಭದಲ್ಲಿ ಲೇಖಕನೊಬ್ಬ ಬಳಸುವ ಹಿಂದೆಮುಂದೆ ನೋಡಬಹುದಾದ ದೈವ-ಭಕ್ತಿ ಮತ್ತು ಶ್ರದ್ಧೆ ‘ಭರತದ ಮಧ್ಯಾಹ್ನ’ ಕಥೆಗಳಲ್ಲಿ ಮತ್ತೆ ಮತ್ತೆ ಕಾಣಿಸುವುದು ಕುತೂಹಲಕರ. ಬದುಕನ್ನು ಉನ್ನತಗೊಳಿಸುವ ಹಾಗೂ ಬದುಕಿನ ಚೆಲುವನ್ನು ಅಭಿವ್ಯಕ್ತಿಸುವ ಮೌಲ್ಯದ ರೂಪದಲ್ಲಿ ದೈವ ಮತ್ತು ಭಕ್ತಿ ಕಥೆಗಾರರಿಗೆ ಒದಗಿಬಂದಿವೆ. ಕಥೆಗಳಲ್ಲಿ ಆಗಾಗ ಎಡತಾಕುವ ಮಕ್ಕಳು ಹಾಗೂ ಮಕ್ಕಳಂಥ ಹಿರಿಯರು ಕೂಡ ಮೌಲ್ಯಸಂಕೇತದ ಪ್ರತೀಕಗಳೇ ಆಗಿದ್ದಾರೆ. ಭಾಷೆ ಹಾಗೂ ಶಿಲ್ಪದ ಕಾರಣದಿಂದಲೂ ಚಿಂತಾಮಣಿಯವರ ಕಥೆಗಳು ಗಮನಸೆಳೆಯುತ್ತವೆ.

**ಲೇ: ಚಿಂತಾಮಣಿ ಕೊಡ್ಲೆಕೆರೆ; ಬೆ: ₹ 170; ಪ್ರ: ಅಂಕಿತ ಪುಸ್ತಕ, ಬೆಂಗಳೂರು. ಫೋನ್: 9019190502**

---

## ಬಾನುಲಿ ಧ್ವನಿ




**‘ಬಾನುಲಿ ಧ್ವನಿ’** ಹಿರಿಯ ಲೇಖಕಿ ಶಾಂತಾದೇವಿ ಅವರ ಸ್ಮರಣೆಯ ರೂಪದಲ್ಲಿ ಪ್ರಕಟಗೊಂಡಿರುವ ಕೃತಿ. ಶಾಂತಾದೇವಿ ಅವರ ರೇಡಿಯೊ ನಾಟಕಗಳು, ಭಾಷಣ, ಚಿಂತನಗಳು ಹಾಗೂ ಲೇಖನಗಳನ್ನು ಅವರ ಕುಟುಂಬ ಪುಸ್ತಕ ರೂಪದಲ್ಲಿ ಒಟ್ಟುಗೂಡಿಸಿದೆ.

ಇಲ್ಲಿನ ಬರಹಗಳು, ‘ಬಾನುಲಿ ನಾಟಕಗಳು’, ‘ಬಾನುಲಿ ಭಾಷಣಗಳು’, ‘ಇತರ ಲೇಖನಗಳು’ ಹಾಗೂ ‘ಅನುವಾದಿತ ಕತೆಗಳು’ ಎನ್ನುವ ನಾಲ್ಕು ಭಾಗಗಳಲ್ಲಿವೆ. ಅನುಬಂಧದಲ್ಲಿ ಶಾಂತಾದೇವಿ ಕಣವಿ ಅವರನ್ನು ಹೇಮಾ ಪಟ್ಟಣಶೆಟ್ಟಿ ಅವರು ಸಂದರ್ಶಿಸಿರುವ ಬರಹವಿದೆ. ಲೇಖಕಿಯ ಬದುಕು-ಸಾಧನೆಗೆ ಸಂಬಂಧಿಸಿದ ವಿವರಗಳು ಅನುಬಂಧದಲ್ಲಿವೆ.

ಬದುಕಿನ ಬಗ್ಗೆ ಅಪಾರ ಪ್ರೇಮ ಹಾಗೂ ಶ್ರದ್ಧೆಯುಳ್ಳ ಸುಂದರ ವ್ಯಕ್ತಿತ್ವವೊಂದರ ದರ್ಶನದ ರೂಪದಲ್ಲಿ ಇಲ್ಲಿನ ಬರಹಗಳನ್ನು ನೋಡಬಹುದು. ‘ಬಾನುಲಿ ನಾಟಕ’ ಪ್ರಕಾರದಲ್ಲಿ ಶಾಂತಾದೇವಿ ಅವರು ಸಾಧಿಸಿದ್ದ ಹಿಡಿತಕ್ಕೆ ನಿದರ್ಶನಗಳೂ ಇಲ್ಲಿವೆ. ತಮ್ಮ ಒಡನಾಟಕ್ಕೆ ಬಂದ ವ್ಯಕ್ತಿತ್ವಗಳ ಕುರಿತು ಶಾಂತಾದೇವಿ ಅವರು ದಾಖಲಿಸಿರುವ ಟಿಪ್ಪಣಿಗಳೂ ಸೊಗಸಾಗಿವೆ.

**ಲೇ: ಶಾಂತಾದೇವಿ ಕಣವಿ; ಪು: 464; ಬೆ: ₹ 450; ಪ್ರ: ಸಂವಹನ, ಮೈಸೂರು. ಫೋ: 9902639593.**